ದಿನಾಂಕಃ 18-01-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆಸಿದ ವಿಷಯಗಳು ನಿಜ ಇರುತ್ತವೆ. ಅದಕ್ಕೆ ನಾನೇ ಸಹಿ ಮಾಡಿರುತ್ತೇನೆ.

<u>ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದ</u>

1955 ರಿಂದ 1968 ರವರೆಗಿನ ದಾವಾ ಸ್ವತ್ತಿನ ಆರು ಖಾಸ್ರಾ ಪಹಣಿಗಳ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-1 ರಿಂದ 6 ಎಂದು ಗುರುತಿಸಲಾಯಿತು. 1968 ರಿಂದ 1976 ರವರೆಗಿನ ಸರ್ವೇ ನಂ.175/ಎ ನ ಎರಡು ಕೈಬರಹ ಪಹಣಿಗಳ ದೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-7 ಮತ್ತು 8 ಎಂದು ಗುರುತಿಸಲಾಯಿತು. ಸರ್ವೇ ನಂ. 175/ಬಿ ನ 1983 ರಿಂದ 2000 ವರೆಗಿನ ನಾಲ್ಕು ಕೈಬರಹ ಪಹಣಿಗಳ ದೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-9 ರಿಂದ 12 ಎಂದು ಗುರುತಿಸಲಾಯಿತು. ಒಂದು ಮ್ಯೂಟೇಶನನ್ನು ಹಾಜರಪಡಿಸಿದ್ದು ಅದನ್ನು ನಿಪಿ-13 ಎಂದು ಗುರುತಿಸಲಾಯಿತು. ದಿಃ 09-08-2023 ರ ವಲ್ಕಂದಿನ್ನಿ ಕಂದಾಯ ನಿರೀಕ್ಷಕರ ಆದೇಶದ ದೃಢೀಕೃತ ನಕಲನ್ನು ಹಾಜರಪಡಿಸಿದ್ದು ಅದನ್ನು ನಿಪಿ-14 ಎಂದು ಗುರುತಿಸಲಾಯಿತು. ವಂಶವೃಕ್ಷ ದೃಢೀಕೃತ ನಕಲನ್ನು ಹಾಜರಪಡಿಸಿದ್ದು ಅದನ್ನು ನಿಪಿ-15 ಎಂದು ಗುರುತಿಸಲಾಯಿತು.

ರೂ.20 ರ ಛಾಪಾ ಕಾಗದದ ಮೇಲೆ ದಿಃ 26-04-2021 ರಂದು ಮಾಡಿಕೊಂಡಿದ್ದಾರೆ ಎಂದು ಹೇಳಲಾದ ನೋಂದಾಯಿತವಲ್ಲದ ವಿಭಾಗಪತ್ರವನ್ನು ಹಾಜರಪಡಿಸಿರುತ್ತಾರೆ, ಅದು ನೋಂದಾಯಿತವಲ್ಲದ ದಾಖಲೆ ಆಗಿರುವುದರಿಂದ ಮತ್ತು ಕೊರತೆ ಮುದ್ರಾಂಕ ಶುಲ್ಕ ಇರುವ ಕಾರಣ ಅದನ್ನು ನಿಶಾನೆಯಾಗಿ ಗುರುತಿಸಿರುವುದಿಲ್ಲ. ಆ ವಿಭಾಗ ಪತ್ರದ ಮೇಲೆ ಕೊರತೆ ಮುದ್ರಾಂಕ ಶುಲ್ಕ ಮತ್ತು ದಂಡದ ಬಗ್ಗೆ ಸುಣಾವಣೆಗಾಗಿ ಮುಂದೂಡಿ ಆ ದಾಖಲೆಯನ್ನು ಇಂಪೌಂಡ್ ಮಾಡಿಕೊಂಡು ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.